
ಭಾರದ್ವಾಜ್ ತಮ್ಮ 'ನಕ್ಸಲ್ ದೇಶ್ ಕೀ ಮರೀಚಿಕಾ' (ಕನ್ನಡದಲ್ಲಿ: ಸತ್ತವರ ಸೊಲ್ಲು) ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಸರಿಸುಮಾರು ಪುಸ್ತಕದ ಮಧ್ಯಭಾಗದಲ್ಲಿ ಉಲ್ಲೇಖಿತವಾಗಿರುವ ಈ ಕಥೆ ಇಡೀ ಪುಸ್ತಕ ಓದಿ ಮುಗಿಸಿದ ಮೇಲೆ ಮಹಾಭಾರತದಲ್ಲಿ ಬರುವ ಭಗವದ್ಗೀತೆ ವಾಚನದ ಭಾಗದಂತೆ ನಮ್ಮ ಮನಸ್ಸಿನಲ್ಲಿ ಹೊಳೆಯತೊಡಗುತ್ತದೆ.

ದಾರಿ, ಉದ್ದೇಶ, ಕ್ರಮಗಳಲ್ಲಿ ಎಷ್ಟೇ ವ್ಯತ್ಯಾಸಗಳಿದ್ದರೂ ಪ್ರಭುತ್ವ ಮತ್ತು ಅದರ ವಿರುದ್ಧ ಯುದ್ಧ ಸಾರಿ ಪರ್ಯಾಯ ವ್ಯವಸ್ಥೆ ಕಟ್ಟಲು ಹೊರಟಿರುವ ನಕ್ಸಲರು ಇಬ್ಬರೂ, ಕಾಡಿನೊಂದಿಗೆ ಹೊಕ್ಕುಳಬಳ್ಳಿ ಸಂಬಂಧ ಸ್ಥಾಪಿಸಿಕೊಂಡು ಅದೆಷ್ಟೋ ಕಾಲದಿಂದ ಬದುಕುತ್ತಿರುವ ಆದಿವಾಸಿಗಳಿಗೆ, ಇಡೀ ಕಾಡಿಗೇ 'ಪ್ರಾರ್ಥನೆಯನ್ನು ಕಲಿಸಿಕೊಡಲು ಹೊರಟಿರುವ ಪಾದ್ರಿ'ಗಳಂತೆ ಭಾಸವಾಗುತ್ತಾರೆ. ಈ ಕಥೆಯಲ್ಲೇನೋ ಸಾಧುಗಳ ಶಕ್ತಿಯ ಅರಿವಾಗಿ ಪಾದ್ರಿ ಕ್ಷಮೆ ಕೇಳುತ್ತಾನೆ. ಆದರೆ ವಾಸ್ತವದಲ್ಲಿ ಪ್ರಭುತ್ವಕ್ಕಾಗಲಿ, ನಕ್ಸಲರಿಗಾಗಲಿ, ಕಾಡು ಮತ್ತು ಕಾಡಿನ ನಿವಾಸಿಗಳ ಶಕ್ತಿಯ ಬಗ್ಗೆ ಅರಿವಾಗಲಿ, ಕಾಳಜಿಯಾಗಲಿ ಪ್ರಾಮಾಣಿಕವಾಗಿ ಇದ್ದಂತಿಲ್ಲ. ಅದನ್ನು ಅರಿತುಕೊಳ್ಳುವ ಬದಲು, ಅವರನ್ನು ಉದ್ಧರಿಸುವ, ರಕ್ಷಿಸುವ, ಪಳಗಿಸುವ, ಹತ್ತಿಕ್ಕುವ ನೆಪಗಳಲ್ಲಿ ಅವರ ಶಕ್ತಿಯನ್ನು ಕುಗ್ಗಿಸಿ ತೇಜೋಹೀನರನ್ನಾಗಿಸುವ ಪ್ರಕ್ರಿಯೆ ಎರಡೂ ಎಡೆಗಳಿಂದ ನಿರಂತರವಾಗಿ ನಡೆಯುತ್ತಲೇ ಬರುತ್ತಿದೆ. ದಡಗಳ ಜಗಳದಲ್ಲಿ ನದಿಯನ್ನು ಬತ್ತಿಸಲಾಗುತ್ತಿದೆ. ಪ್ರಭುತ್ವ ಮತ್ತು ನಕ್ಸಲರ ನಡುವಿನ ಹಿಂಸಾತ್ಮಕ ಘರ್ಷಣೆಯಲ್ಲಿ ಸೊರಗುತ್ತಿರುವುದು ಸಾಮಾನ್ಯ ಜನರು ಎಂಬುದಕ್ಕೆ ಪುರಾವೆಯೂ ಆಶುತೋಷ್ ಭಾರದ್ವಾಜ್ ಅವರ ಇದೇ ಪುಸ್ತಕದ ಕೊನೆಯ ಭಾಗದಲ್ಲಿ ಸಿಗುತ್ತದೆ. ಅವರ ಪ್ರಕಾರ, 2020ರಲ್ಲಿ ಛತ್ತೀಸಗಢ ಒಂದರಲ್ಲೇ 4,337 ಜನರು ಪ್ರಭುತ್ವ ಮತ್ತು ನಕ್ಸಲರ ನಡುವಿನ ಘರ್ಷಣೆಗೆ ಬಲಿಯಾಗಿದ್ದಾರೆ. ಇದರಲ್ಲಿ 1,046 ನಕ್ಸಲರು, 1,164 ಸೈನಿಕರು, 42 ಪೊಲೀಸ್ ಬೇಹುಗಾರರು, 56 ಸರ್ಕಾರಿ ನೌಕರರು ಮತ್ತು ಅತಿ ಹೆಚ್ಚು ಸಂಖ್ಯೆಯಲ್ಲಿ ಇರುವುದು, ಅಂದರೆ 1,669 ಜನ ಸಾಮಾನ್ಯರು!

* * *




**ಸತ್ತವರ ಸೊಲ್ಲು**
ಹಿಂದಿ ಮೂಲ: ಆಶುತೋಷ್ ಭಾರದ್ವಾಜ್;
ಕನ್ನಡಕ್ಕೆ: ಕಾರ್ತಿಕ್ ಆರ್.
ಪು.: 344; ಬೆ.: ₹ 380
ಪ್ರ.: ಛಂದ ಪುಸ್ತಕ, ಬೆಂಗಳೂರು.
**ಫೋನ್:** 98444 22782